# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017; +91-80-2226 7470

ಮಿಂಚಂಚೆ: info@bsgkarnataka.org / shanthigruha@scout.org.in ಅಂತರ್ಜಾಲ:www.bsgkarnataka.org


ಸಂಖ್ಯೆ:ಎಸ್.ಹೆಚ್.ಕ್ಯೂ/ತ 1/2025-26/1284 ದಿನಾಂಕ:10.10.2025

ರಾಜ್ಯದ ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

ಮಾನ್ಯರೆ,

ವಿಷಯ:- 2025-26ನೇ ಸಾಲಿನ ಸರ್ಕಾರಿ, ಅನುದಾನಿತ, ಅನುದಾನರಹಿತ ಕಿರಿಯ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕ/ಶಿಕ್ಷಕಿಯರಿಗೆ ಅಕ್ಟೋಬರ್-ನವೆಂಬರ್ 2025 ಮಾಹೆಯ ಅಂತ್ಯದೊಳಗೆ ಒಂದು ದಿನದ ಪ್ರಾರಂಭಿಕ ತರಬೇತಿ ಶಿಬಿರಕ್ಕೆ ದಿನಾಂಕವನ್ನು ನಿಗಧಿಪಡಿಸಿ ಸಂಘಟಿಸಿ ನಡೆಸುವ ಬಗ್ಗೆ.

ಉಲ್ಲೇಖ:- ಎಸ್.ಹೆಚ್.ಕ್ಯೂ/ತ.1/2025-26/532 ದಿನಾಂಕ 2306.2025

******

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಸಂಸ್ಥೆಯು ಪ್ರಪಂಚದಾದ್ಯಂತ ವ್ಯಾಪಿಸಿರುವ ಏಕರೀತಿಯ ಸಮವಸ್ತ್ರವನ್ನು ಹೊಂದಿರುವ ಏಕೈಕ ಚಳವಳಿ. ಈ ಸಂಸ್ಥೆಯು ಯುವಜನರಲ್ಲಿ ದೇಶಾಭಿಮಾನ, ಸೇವೆ, ಕ್ರಿಯಾಶೀಲತೆ, ಕ್ರೀಡಾಮನೋಭಾವ, ಸಚ್ಚಾರಿತ್ರ್ಯ, ಜೀವನ ಕೌಶಲ್ಯ ಮತ್ತು ನಾಯಕತ್ವ ಗುಣವನ್ನು ಕಲಿಸುವ, ಸರ್ವಧರ್ಮಗಳ ತಿರುಳನ್ನು ಸಾರುವ ಹಾಗೂ ಶಿಸ್ತಿನ ನಾಗರೀಕರನ್ನು ಬೆಳೆಸುವ ಒಂದು ಅಂತರರಾಷ್ಟ್ರೀಯ ಯುವ ಚಳವಳಿಯಾಗಿದೆ.

ಎಲ್ಲಾ ಶಾಲಾ – ಕಾಲೇಜುಗಳಲ್ಲಿ ಕಬ್/ಬುಲ್‌ಬುಲ್, ಸ್ಕೌಟ್/ಗೈಡ್ ದಳಗಳನ್ನು ತೆರೆದು ವಿದ್ಯಾರ್ಥಿಗಳಿಗೆ ಕಬ್/ಬುಲ್‌ಬುಲ್, ಸ್ಕೌಟ್/ಗೈಡ್ ಪ್ರಗತಿ ಪರ ತರಬೇತಿ ನೀಡುವಂತೆ ಸರಕಾರಿ ಆದೇಶವಿದ್ದು ಇದರಂತೆ ತಮ್ಮ ಜಿಲ್ಲೆಯ, ಪ್ರತಿ ತಾಲ್ಲೂಕಿನ ವ್ಯಾಪಿಯಲ್ಲಿ ಬರುವ ಸರ್ಕಾರಿ, ಅನುದಾನಿತ, ಅನುದಾನರಹಿತ ಕಿರಿಯ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಕನಿಷ್ಟ 50 ಶಿಕ್ಷಕ/ಶಿಕ್ಷಕಿಯರಿಗೆ ಅಕ್ಟೋಬರ್ – ನವೆಂಬರ್ 2025 ಮಾಹೆಯ ಅಂತ್ಯದೊಳಗೆ ಒಂದು ದಿನದ ಪ್ರಾರಂಭಿಕ ತರಬೇತಿ ಶಿಬಿರವನ್ನು ಪ್ರತಿ ತಾಲ್ಲೂಕು ಮಟ್ಟದಲ್ಲಿ ಆಯೋಜಿಸಲು ಕೋರುತ್ತೇವೆ.

ಒಂದು ದಿನದ ಪ್ರಾರಂಭಿಕ ಶಿಬಿರಕ್ಕೆ ತಮ್ಮ ಜಿಲ್ಲೆಯ, ಪ್ರತಿ ತಾಲ್ಲೂಕಿನ ವ್ಯಾಪಿಯಲ್ಲಿ ಬರುವ ಕಿರಿಯ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕ/ಶಿಕ್ಷಕಿಯವರನ್ನು ಕರೆಯುವುದು ಹಾಗೂ ಇದುವರೆಗೂ ತರಬೇತಿಯನ್ನು ಹೊಂದಿರದ ಶಿಕ್ಷಕ/ಶಿಕ್ಷಕಿಯರನ್ನು (ಕಬ್/ಫ್ಲಾಕ್/ಸ್ಕೌಟ್/ಗೈಡ್ ತರಬೇತಿಗೆ) ನಿಯೋಜಿಸುವಲ್ಲಿ, ಸಂಬಂಧಪಟ್ಟ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ / ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆ ಮತ್ತು ಶಾಲಾ ಮುಖ್ಯಸ್ಥರುಗಳಿಂದ, ಸೂಕ್ತ ಆದೇಶ ಪಡೆಯುವ ವ್ಯವಸ್ಥೆ ಮಾಡಿಕೊಳ್ಳುವುದು.

**ಪ್ರತಿಯೊಬ್ಬರಿಗೆ ಶಿಬಿರದ ಶುಲ್ಕ ಮತ್ತು ಘಟಕ ನೊಂದಾವಣೆ ಶುಲ್ಕಗಳನ್ನು ಈ ಕೆಳಕಂಡಂತೆ ಭರಿಸುವ ವ್ಯವಸ್ಥೆ ಮಾಡುವುದು.**

| | |
|---|---|
| **ಶಿಬಿರದ ಶುಲ್ಕ** | **ರೂ. 150/-** |
| **ಕಬ್/ಫ್ಲಾಕ್ ನೊಂದಣಿ ಶುಲ್ಕ** | **ರೂ. 98/-** |
| **ಸ್ಕೌಟ್/ಗೈಡ್ ನೊಂದಣಿ ಶುಲ್ಕ** | **ರೂ. 242/-** |

ಶಿಬಿರ ಶುಲ್ಕ ಮತ್ತು ಘಟಕ ನೊಂದಾವಣಿ ಶುಲ್ಕವನ್ನು ಶಿಕ್ಷಕರು ತರಬೇತಿಗೆ ಹಾಜರಾಗುವ ಸಂದರ್ಭದಲ್ಲಿ ಪಾವತಿಸಬೇಕಾಗಿರುತ್ತದೆ. ಈ ಅಭ್ಯರ್ಥಿಗಳು ಶಿಬಿರಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚ, ಶಿಬಿರ ಶುಲ್ಕ ಮತ್ತು ಘಟಕ ನೊಂದಾವಣಿ ಶುಲ್ಕವನ್ನು ಶಾಲೆಗಳ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಾಲ್ತಿ ಅಥವಾ ಸಂಚಿತ ನಿಧಿಯಿಂದ ಭರಿಸಲು ಮತ್ತು ಆ ದಿನದ ಗೈರು ಹಾಜರಿಯನ್ನು ಅನ್ಯ ಕಾರ್ಯನಿಮಿತ್ತ ಎಂದು ಪರಿಗಣಿಸಲು ಅನುಮತಿಯ ವ್ಯವಸ್ಥೆ ಮಾಡಿಕೊಳ್ಳುವುದು.

ಸ್ಕೌಟ್ ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ.ಗಂಗಪ್ಪಗೌಡ)
ರಾಜ್ಯಕಾರ್ಯದರ್ಶಿ

**ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ**

ಪ್ರತಿಯನ್ನು ಮಾಹಿತಿಗಾಗಿ

1. ಮಾನ್ಯ ರಾಜ್ಯ ಆಯುಕ್ತರು (ಸ್ಕೌಟ್ಸ್) & (ಗೈಡ್ಸ್), ಭಾ. ಸ್ಕೌ & ಗೈ ಕರ್ನಾಟಕ
2. ಮಾನ್ಯ ರಾಜ್ಯ ಆಯುಕ್ತರು (ಸ್ಕೌಟ್ಸ್) & (ಗೈಡ್ಸ್), (ವ.ಸಂ), ಭಾ. ಸ್ಕೌ & ಗೈ ಕರ್ನಾಟಕ
3. ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಆಯುಕ್ತರು (ಸ್ಕೌಟ್ & ಗೈಡ್) ಭಾ. ಸ್ಕೌ & ಗೈ ಕರ್ನಾಟಕ
4. ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್ಸ್) & (ಗೈಡ್ಸ್)
5. ಎ.ಎಸ್.ಒ.ಸಿ/ಡಿ.ಒ.ಟಿ/ಡಿ.ಒ/ಎಸ್.ಜಿ.ವಿ ಭಾ. ಸ್ಕೌ & ಗೈ
6. ಕಛೇರಿ ಪ್ರತಿ